
ರಂಗಾಯಣ ರಘು




(ನಿ: ಡಾ. ಸೂರಿ) ಸಿನಿಮಾದ ಮೂಲಕ ಶ್ರೀಮುರಳಿ ಸಮಾಧಾನಕರ ಗೆಲುವು ಕಂಡರಷ್ಟೇ.

ಸಂತೋಷ್ ಆನಂದರಾಮ್ ನಿರ್ದೇಶನದ 'ಯುವ' ಸಿನಿಮಾದ ಮೂಲಕ ರಾಜ್ ಕುಟುಂಬದ ಯುವ ರಾಜ್‌ಕುಮಾರ್ ಕನ್ನಡ ಚಿತ್ರರಂಗಕ್ಕೆ ನಾಯಕನಾಗಿ ಪರಿಚಯಗೊಂಡರು. 'ಯುವ' ಸಿನಿಮಾದ್ದು ಸಾಧಾರಣ ಯಶಸ್ಸು. ರಾಘವೇಂದ್ರ ರಾಜ್‌ಕುಮಾರ್ ಪುತ್ರ ಯುವ ಅವರನ್ನು ಪುನೀತ್ ರಾಜ್‌ಕುಮಾರ್ ಉತ್ತರಾಧಿಕಾರಿಯಾಗಿ ಬಿಂಬಿಸುವ ಪ್ರಯತ್ನವೂ ನಡೆಯಿತು. ಪುನೀತ್‌ರ ವರ್ಚಸ್ಸು ಕೇವಲ ತೆರೆಯ ಮೇಲಿನ ಬಿಂಬಗಳನ್ನಷ್ಟೇ ಅವಲಂಬಿಸಿದ್ದಲ್ಲ, ನೃತ್ಯ–ಸಾಹಸ ದೃಶ್ಯಗಳನ್ನಷ್ಟೇ ನೆಚ್ಚಿಕೊಂಡಿದ್ದಲ್ಲ ಎನ್ನುವುದನ್ನು ಅರಿತಲ್ಲಿ, ಯುವ ಅವರ ಮುಂದಿನ ದಿನಗಳು ಭರವಸೆ ಹುಟ್ಟಿಸುವಂತಿರಬಹುದು.

ಇಂದ್ರಜಿತ್ ಲಂಕೇಶ್ ತಮ್ಮ ಪುತ್ರ ಸಮರ್ಜಿತ್‌ಗಾಗಿ ರೂಪಿಸಿದ ಸಿನಿಮಾ 'ಗೌರಿ'. ಈ ಚಿತ್ರದ ಮೂಲಕ ಸಮರ್ಜಿತ್ ಹಾಗೂ ಸಾನ್ಯಾ ಅಯ್ಯರ್ ನಾಯಕ ನಾಯಕಿಯಾಗಿ ಚಿತ್ರರಂಗಕ್ಕೆ ಪರಿಚಯಗೊಂಡರು.

## ನಾಯಕಿಯರಿಗೆ ಬರಗಾಲ

ನಾಯಕಿಯರ ಪಾಲಿಗೆ 2024 ಅಷ್ಟೇನೂ ಯಶಸ್ವೀ ವರ್ಷವಲ್ಲ. ಇತ್ತೀಚಿನ ವರ್ಷಗಳಲ್ಲಿ ಭರವಸೆ ಹುಟ್ಟಿಸಿರುವ ರುಕ್ಮಿಣಿ ವಸಂತ್ ನಟನೆಯ ಎರಡು ಸಿನಿಮಾಗಳು ('ಭೈರತಿ ರಣಗಲ್' ಹಾಗೂ 'ಬಘೀರ') ತೆರೆಕಂಡರೂ, ಆ ಚಿತ್ರಗಳಲ್ಲಿ ನಾಯಕಿಯ ನಟನೆಗೆ ಇದ್ದ ಅವಕಾಶ ಅಷ್ಟಕ್ಕಷ್ಟೇ. ಸದ್ಯ ತೆಲುಗಿನ ಜೂನಿಯರ್ ಎನ್‌ಟಿಆರ್ ಸಿನಿಮಾದಲ್ಲಿ ಕನ್ನಡದ ರುಕ್ಮಿಣಿ ಅಭಿನಯಿಸುತ್ತಿರುವ ಸುದ್ದಿ ಚಾಲ್ತಿಯಲ್ಲಿದೆ.

ಮತ್ತೊಬ್ಬ ಪ್ರತಿಭಾವಂತ ನಟಿ ಚೈತ್ರಾ ಜೆ. ಆಚಾರ್ ನಟನೆಯ 'ಬ್ಲಿಂಕ್' ಸಿನಿಮಾ ಈ ವರ್ಷ ತೆರೆಕಂಡಿತು. ಕಿರುತೆರೆಯ ಪ್ರತಿಭಾವಂತ ನಟಿ ಅಂಕಿತಾ ಅಮರ್ 'ಇಬ್ಬನಿ ತಬ್ಬಿದ ಇಳೆಯಲಿ' (ನಿ: ಚಂದ್ರಜಿತ್ ಬೆಳ್ಳಿಯಪ್ಪ) ಮೂಲಕ ನಾಯಕಿಯಾಗಿ ಚಿತ್ರರಂಗಕ್ಕೆ ಪರಿಚಿತರಾದರು. ರಾಧಿಕಾ ಕುಮಾರಸ್ವಾಮಿ ಮುಖ್ಯಪಾತ್ರದಲ್ಲಿ ನಟಿಸಿದ್ದ 'ಭೈರಾದೇವಿ' (ನಿ: ಶ್ರೀ ಜೈ) ಕೂಡ ಕಥೆಯ ಕಾರಣದಿಂದಾಗಿ ಗಮನಸೆಳೆಯಿತು.

'ಕಾಂತಾರ' ಸಿನಿಮಾದ ಯಶಸ್ಸಿನ ಭಾಗವಾದ ನಟಿ ಸಪ್ತಮಿ ಗೌಡ 'ಯುವ' ಚಿತ್ರದಲ್ಲಿ ನಾಯಕಿಯಾಗಿ ಕಾಣಿಸಿಕೊಂಡರು. ಆದರೆ, ಅವರು 2024ರಲ್ಲಿ ಹೆಚ್ಚು ಸುದ್ದಿಯಲ್ಲಿದ್ದುದು ಸಿನಿಮೇತರ ಕಾರಣಗಳಿಂದಾಗಿ.

## 5000 ಸಿನಿಮಾ ಮತ್ತು ದೇವರೇ ದಿಕ್ಕು!

ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ತೆರೆಕಂಡು ತೊಂಬತ್ತು ವರ್ಷಗಳು ತುಂಬಿದ 2024ರ ಸಂದರ್ಭವೇ 5000 ಕನ್ನಡ ಸಿನಿಮಾಗಳ ಮೈಲಿಗಲ್ಲಿಗೂ ಸಾಕ್ಷಿಯಾಯಿತು. 2018ರಲ್ಲಿ 4000 ಚಿತ್ರಗಳ ಗಡಿ ದಾಟಿದ್ದ ಕನ್ನಡ ಚಿತ್ರರಂಗ, ಆರು ವರ್ಷಗಳ ಅವಧಿಯಲ್ಲಿ ಮತ್ತೂ ಒಂದು ಸಾವಿರ ಸಿನಿಮಾಗಳನ್ನು ತನ್ನ ಖಾತೆಗೆ ಸೇರಿಸಿಕೊಂಡಿದೆ. ಆದರೆ, ಈ ಸಂಖ್ಯಾಸಂಭ್ರಮ ಚಿತ್ರರಂಗದಲ್ಲೇನೂ ಹುಮ್ಮಸ್ಸು ತಂದಂತಿಲ್ಲ.

ಚಿತ್ರೋದ್ಯಮದ ಒಳಿತನ್ನು ಹಂಬಲಿಸಿ ಆಗಸ್ಟ್ 14ರಂದು ಕನ್ನಡ ಚಿತ್ರರಂಗ ಹೋಮ ಹವನ ನಡೆಸಿತು. ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ 'ಕಲಾವಿದರ ಸಂಘ'ದ ಕಟ್ಟಡದಲ್ಲಿ ನಡೆದ ಪೂಜೆ, ಶಾಂತಿ ಹೋಮದ ಕ್ರಿಯೆಗಳನ್ನು ನಟ ದರ್ಶನ್ ಅವರ ಕಂಟಕ ನಿವಾರಣೆಗಾಗಿ ನಡೆಸಿದ ಪೂಜಾವಿಧಿಗಳು ಎನ್ನುವ ಮಾತುಗಳು ಕೇಳಿಬಂದರೂ, ಪೂಜೆ ನಡೆಸಿದವರು ಚಿತ್ರರಂಗದ ಒಳಿತಿಗಾಗಿ ನಡೆಸಿದ ಕಾರ್ಯಕ್ರಮವಿದು ಎಂದು ಸ್ಪಷ್ಟಪಡಿಸಿದರು. ಅರ್ಥಪೂರ್ಣ ಸಿನಿಮಾಗಳನ್ನು ರೂಪಿಸುವುದನ್ನು ಬಿಟ್ಟು ಯಶಸ್ಸಿಗಾಗಿ ಹೋಮ ಹವನದ ಮೊರೆ ಹೋದ ಚಿತ್ರರಂಗದ ನಡವಳಿಕೆ ಕೆಲವರ ಟೀಕೆ ಟಿಪ್ಪಣಿಗಳಿಗೂ ಮೂದಲಿಕೆಗೂ ಕಾರಣವಾಯಿತು.

ಚಿತ್ರರಂಗದ ಒಳಿತಿಗಾಗಿ ಒಂದೆಡೆ ಪೂಜೆ ನಡೆಸುವ ಚಿತ್ರೋದ್ಯಮ, ಇನ್ನೊಂದೆಡೆ ಸಮಾಲೋಚನೆಯ ಪ್ರಯತ್ನಗಳನ್ನೂ ನಡೆಸಿದೆ. ಕನ್ನಡ ಚಿತ್ರರಂಗ ಎದುರಿಸುತ್ತಿರುವ ಬಿಕ್ಕಟ್ಟಿಗೆ



### 'ರಂಗನಾಯಕ'ನ ನಿರ್ಗಮನ

'ಮಠ', 'ಎದ್ದೇಳು ಮಂಜುನಾಥಾ' ಸಿನಿಮಾಗಳ ಮೂಲಕ ಕನ್ನಡ ಚಿತ್ರರಂಗದಲ್ಲಿ ಲವಲವಿಕೆ ಮೂಡಿಸಿದ್ದ ನಿರ್ದೇಶಕ ಗುರುಪ್ರಸಾದ್ ಆತ್ಮಹತ್ಯೆ ಮಾಡಿಕೊಂಡಿದ್ದು 2024ರ ಕಹಿ ಘಟನೆಗಳಲ್ಲೊಂದು. ಬೆಂಗಳೂರಿನ ಮಾದನಾಯಕನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಒಂದರಲ್ಲಿ ಗುರುಪ್ರಸಾದ್ ಮೃತದೇಹ ನವೆಂಬರ್ ತಿಂಗಳ ಆರಂಭದಲ್ಲಿ ಪತ್ತೆಯಾಯಿತು. ಅವರ ಇತ್ತೀಚಿನ ಸಿನಿಮಾ, ಜಗ್ಗೇಶ್ ನಾಯಕರಾಗಿ ನಟಿಸಿದ್ದ 'ರಂಗನಾಯಕ' ಸೋಲುಂಡಿತ್ತು. ಸಾಲದ ಭಾದೆಯೇ ಗುರುಪ್ರಸಾದ್ ಆತ್ಮಹತ್ಯೆಗೆ ಕಾರಣ ಎನ್ನಲಾಗಿದೆ. ಹೊಸ ಬಗೆಯ ಸಿನಿಮಾಗಳನ್ನು ರೂಪಿಸಿದ್ದ, ತಮ್ಮ ಬರವಣಿಗೆ ಹಾಗೂ ನಿರ್ದೇಶನದ ಶಕ್ತಿಯ ಬಗ್ಗೆ ಅಪಾರ ವಿಶ್ವಾಸವಿದ್ದ, ವ್ಯಂಗ್ಯವನ್ನು ಅಸ್ತ್ರದಂತೆ ಬಳಸುತ್ತಿದ್ದ ನಿರ್ದೇಶಕನೊಬ್ಬ ತನ್ನ ನಡುವಯಸ್ಸಿನಲ್ಲಿಯೇ ನಿರ್ಗಮಿಸುವಂತಾದುದಕ್ಕೂ ಕನ್ನಡ ಚಿತ್ರರಂಗ ತಲುಪಿರುವ ಬೌದ್ಧಿಕ ದಾರಿದ್ರ್ಯಕ್ಕೂ ಸಂಬಂಧ ಇಲ್ಲದಿಲ್ಲ.

